ಮೂರನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

ಓಎಸ್.ನಂ.104/2012 ಪಿಡಬ್ಲ್ಯೂ-1

ದಿನಾಂಕಃ 05-12-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 6 ನೇ ಪ್ರತಿವಾದಿಯರ ಪರ ಮಾನ್ಯ ಶ್ರೀ. ಜಿ ಎಸ ಎಸ್ ವಕೀಲರಿಂದಃ-**

ದಿನಾಂಕ 10-10-1994 ರಂದು ಹಿಂದೆ ಆಗಿದ್ದ ವಿಭಾಗವನ್ನು ಹೊಗಳಿಸಿ ನನ್ನ ತಂದೆ ಮತ್ತು 4 ಮತ್ತು 6 ನೇ ಪ್ರತಿವಾದಿ ವಿಭಾಗಪತ್ರದಲ್ಲೂ ಸಹಾ ದಾವಾ ಆಸ್ತಿ ಸಂಖ್ಯೆ 1 ಮತ್ತು 2 ನ್ನು 6 ನೇ ಪ್ರತಿವಾದಿಯ ಪಾಲಿಗೆ ಬಂದ ಬಗ್ಗೆ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ವಿಭಾಗಪತ್ರದ ಪ್ರಕಾರ ದಾವಾ ಐಟಂ ನಂಬರ್ 1 ಮತ್ತು 2 ನ್ನು 6 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ 6 ನೇ ಪ್ರತಿವಾದಿಯು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಎಲ್ಲರೂ ಸ್ವಾಧೀನದಲ್ಲಿದ್ದಾರೆ ಎನ್ನುತ್ತಾರೆ. ದಾವಾ ಐಟಂ ನಂಬರ್ 2 ವಿಭಾಗ ಪತ್ರದ ಪ್ರಕಾರ 6 ನೇ ಪ್ರತಿವಾದಿಗೆ ಖಾತೆ ಆಗಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳಿಗೆ 6 ನೇ ಪ್ರತಿವಾದಿಯು ಮಾಲೀಕರಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಐಟಂ ನಂಬರ್ 1 ರ ಖಾತೆ 6 ನೇ ಪ್ರತಿವಾದಿ ಹೆಸರಿಗೆ ಇದೆ ಎಂದರೆ ಸಾಕ್ಷಿ ಅವರು ಸೃಷ್ಟಿಸಿಕೊಂಡಿದ್ದಾರೆ ಎನ್ನುತ್ತಾರೆ. ಸದರಿ ದಾಖಲೆಯನ್ನುಬೇರೆ ಕಡೆ ಪ್ರಶ್ನೆ ಮಾಡಿರುವುದಿಲ್ಲ ಇದೇ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತೇನೆ. ದಾವಾ ಐಟಂ 3 ಮತ್ತು 4 ನನ್ನ ತಂದೆ ಮತ್ತು 4 ನೇ ಪ್ರತಿವಾದಿ ಹೆಸರಿನಲ್ಲಿ ಖಾತೆ ಇದೆ ಅದನ್ನು ಸಹಾ ಎಲ್ಲೂ ಪ್ರಶ್ನೆ ಮಾಡಿರುವುದಿಲ್ಲ.

ದಿನಾಂಕ 10-10-1994 ರಲ್ಲಿಯೇ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಈ ಹಿಂದೆ ಆದ ವಿಭಾಗ ಪತ್ರವನ್ನು ಹೊಗಳಿಸಿ ನನ್ನ ತಂದೆ ಮತ್ತು 4 ಮತ್ತು 6 ನೇ ಪ್ರತಿವಾದಿಗಳು ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರಕ್ಕೆ ಮೇಲ್ಕಂಡವರುಗಳು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖಾತೆ ಮಾಡಿಕೊಳ್ಳುವ ಉದ್ದೇಶದಿಂದ ಒಂದು ದಾಖಲೆಯನ್ನು ಮಾಡಿಕೊಳ್ಳುವ ಉದ್ದೇಶದಿಂದ ಸದರಿ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಂಚಾಯಿತಿದಾರರಾದ ಪಿ ಚೆನ್ನಸ್ವಾಮಿ , ಮಾದುಶೆಟ್ಟಿ , ಕೆ ಪಿ ರಾಜು , ಬಿ ಎಸ್ ನಾಗರಾಜು ರವರ ಸಮಕ್ಷಮದಲ್ಲಿ ಮಾಡಲಾಗಿದೆ ಎಂದರೆ ಸರಿಯಲ್ಲ. ಮೇಲ್ಕಂಡವರುಗಳು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಪತ್ರವನ್ನು ಶ್ರೀನಿವಾಸು ಕೆಸ್ತೂರುರವರು ಬರೆದಿರುತ್ತಾರೆ ಎಂದರೆ ಸರಿಯಲ್ಲ.

ಮೇಲ್ಕಂಡ ವ್ಯಕ್ತಿಗಳು ನನಗೆ ಗೊತ್ತಿಲ್ಲ. ಮೇಲ್ಕಂಡ ವ್ಯಕ್ತಿಗಳು ಪಂಚಾಯಿತಿದಾರರು ಮತ್ತು ಪತ್ರ ಬರಹಗಾರರು ಈಗ ಮೃತ ಪಟ್ಟಿರುತ್ತಾರೆ ಎಂದರೆ ಸರಿ .

ವಿಭಾಗ ಪತ್ರಕ್ಕೆ ಮೇಲ್ಕಂಡ ಕೆ ಪಿ ರಾಜು ಸಹಾ ಸಾಕ್ಷಿದಾರರಾಗಿ ರುಜು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ದಾವಾ ಆಸ್ತಿಗಳಲ್ಲಿ ತಮ್ಮ ತಮ್ಮ ಪಾಲಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿ ದಾಖಲೆ ಸೃಷ್ಟಿಸಿಕೊಂಡಿರುತ್ತಾರೆ ಎನ್ನುತ್ತಾರೆ.

ನಾವು ಆಸ್ತಿ ಬೇಕೆಂದು ಯಾವುದೇ ಪಂಚಾಯಿತಿ ಸೇರಿಸಿರುವುದಿಲ್ಲ ನೇರವಾಗಿ ನಾವೇ ಹೂಡಿರುತ್ತೇವೆ. ದಾವ ಆಸ್ತಿಗಳು ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನನ್ನ ತಂದೆ ಮತ್ತು 4 ಮತ್ತು 6 ನೇ ಪ್ರತಿವಾದಿಗಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು 4 ನೇ ಪ್ರತಿವಾದಿ ನನ್ನನ್ನು ಮತ್ತು 1 ನೇ ವಾದಿಯನ್ನು ಎತ್ತಿಕಟ್ಟಿ ಈ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಅವರುಗಳೇ ಭಾಗಾಂಶ ಮಾಡಿಕೊಂಡಿರುವುದರಿಂದ ನಿಜಾಂಶ ಗೊತ್ತಾಗುತ್ತದೆ ಎಂದು ನಮ್ಮ ಮೂಲಕ ಈ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ 1 ನ್ನು 4 ನೇ ಪ್ರತಿವಾದಿ ರಮೇಶರವರು ಮಾಡಿಸಿರುತ್ತಾರೆ ಆ ದಾಖಲೆ ಬಗ್ಗೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಭಾಗದ ಪ್ರಕಾರ ಅವರವರ ಭಾಗದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಮೂರನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,
ನ್ಯಾಯಾಧೀಶರು, ಮದ್ದೂರು.

**ಸಾಕ್ಷಿಯ ಸಹಿಃ**